No. of Printed Pages : 4

2014

# QCA : 33/IV

## ಸಾಮಾನ್ಯ ಅಧ್ಯಯನ : Paper-IV

## GENERAL STUDIES : Paper-IV

ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 250

**Time : 3 hours** | **Maximum marks : 250**

ಪ್ರತಿ ಪ್ರಶ್ನೆಗೂ **200** ಪದಗಳಿಗೆ ಮೀರದಂತೆ ಉತ್ತರಿಸಿ. ಉತ್ತರ ಎಷ್ಟು ದೀರ್ಘವಾಗಿದೆ ಎಂಬುದಕ್ಕಿಂತ ಏನು ಉತ್ತರ ಬರೆದಿದ್ದೀರಿ ಎಂಬುದು ಮುಖ್ಯ. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.

Answer all the questions in NOT MORE THAN **200** words each. Contents of the answer are more important than its length. **All** questions carry equal marks. **12 1/2 × 20= 250 marks**

1. ಸಾರ್ವಜನಿಕ ಸೇವೆಯ ಸುಧಾರಣೆಗಳನ್ನು ವಿವರಿಸಿ ಮತ್ತು ಭಾರತದಲ್ಲಿ ಈ ಸುಧಾರಣೆಗಳ ಅವಶ್ಯಕತೆಯನ್ನು ವಿವರಿಸಿ. **12 1/2**
   Explain public service reforms and the need for reforms in India.

2. ನಾಗರಿಕ ಸೇವಾ ನೀತಿ ಸಂಹಿತೆಯ ಅವಶ್ಯಕತೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ. **12 1/2**
   Critically analyze the need for ethical civil service code.

3. ಸಾರ್ವಜನಿಕ ಸೇವೆಯ ಮೇಲೆ ಸಾಮಾಜಿಕ ಪ್ರಭಾವವನ್ನು ಕುರಿತು ಚರ್ಚಿಸಿ. **12 1/2**
   Discuss Social influence on public service.

4. ಸಾಮಾಜಿಕ ಪ್ರಭಾವ ಮತ್ತು ಮನವರಿಕೆ ಇವುಗಳ ನಡುವಣ ಸಂಬಂಧವನ್ನು ವಿವರಿಸಿ. **12 1/2**
   Explain the relationship between social influence and persuasion.

5. ಸಮಾಜವಾದಿ ಪರಿಕಲ್ಪನೆಯ ಬಗ್ಗೆ ಗಾಂಧಿ ಮತ್ತು ಮಾರ್ಕ್ಸ್ ನಿಲುವುಗಳಲ್ಲಿನ ವ್ಯತ್ಯಾಸವನ್ನು ಬರೆಯಿರಿ. **12 1/2**
   Differentiate Gandhian concepts of Socialism to Marxian concept of socialism.

6. ಭಾರತದ ಪ್ರಜೆಗಳ ಮನೋಭಾವದ ಮೇಲೆ ಸ್ವದೇಶಿ ಚಳುವಳಿಯ ಉಗಮ ಮತ್ತು ಅದರ ಪ್ರಭಾವವನ್ನು ವಿಷದೀಕರಿಸಿ. **12 1/2**
   Trace the origin of swadeshi movement and its influence on the attitude of People in India.

7. ಸಾರ್ವಜನಿಕ ಮತ್ತು ಖಾಸಗಿ ಸಂಬಂಧಗಳಲ್ಲಿ ನೀತಿಗಳ ಪಾಲನೆಯ ಅವಶ್ಯಕತೆಯನ್ನು ವಿವರಿಸಿ. **12 1/2**

Explain the essence of ethics in private and public relationships.

8. ಸಾರ್ವಜನಿಕ ಪ್ರಶಾಸನದಲ್ಲಿ ಸಾರ್ವಜನಿಕ ನಿಧಿಯ ಸೂಕ್ತ ಬಳಕೆ ಮತ್ತು ಭ್ರಷ್ಟಾಚಾರದ ಸವಾಲುಗಳು ಪ್ರಸಕ್ತದಲ್ಲಿನ ಅತಿಮುಖ್ಯ ಸೂಕ್ಷ್ಮ ಅಂಶಗಳು. ಈ ಬಗ್ಗೆ ವಿಮರ್ಶಾತ್ಮಕವಾಗಿ ವಿವರಿಸಿ. **12 1/2**

Appropriate utilization of public fund and challenges of corruption are burning issues at present in public administration. critically evaluate.

9. ಪ್ರಮುಖ ನಾಯಕರುಗಳ ಬದುಕು ಮತ್ತು ಬೋಧನೆಗಳ ಪಾಠಗಳು ಮಾನವ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದಕ್ಕೆ ಸಹಾಯಕಾರಿ ಎನ್ನುವುದನ್ನು ಸೂಕ್ತ ಉದಾಹರಣೆಗಳೊಡನೆ ವಿವರಿಸಿ. **12 1/2**

Describe lessons from the lives and teachings of great leaders help in inculcating human values with suitable illustrations.

10. ಸಾರ್ವಜನಿಕ ಪ್ರಶಾಸನದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಪಕ್ಷಪಾತತೆಯ ಪಾತ್ರವನ್ನು ವಿವರಿಸಿ. **12 1/2**

Delineate role of integrity and impartiality in public administration.

11. ಆಡಳಿತಗಾರನ ಆಲೋಚನೆಗಳು ಮತ್ತು ವರ್ತನೆಗಳೊಂದಿಗೆ ಮೌಲ್ಯಗಳ ಸಂಬಂಧ ಮತ್ತು ಪ್ರಭಾವವನ್ನು ವಿವರಿಸಿ. **12 1/2**

Explain the effect of values its relation with thoughts and behaviour of the Administrator.

12. ಆಡಳಿತದಲ್ಲಿ ನೀತಿಯುತ ಮತ್ತು ನೈತಿಕ ಮೌಲ್ಯಗಳನ್ನು ಬಲಯುತಗೊಳಿಸಲು ಸೂಕ್ತ ಸಲಹೆಗಳನ್ನು ನೀಡಿರಿ. **12 1/2**

Give the suitable suggestion for strengthening of ethical and moral values in Governance.

13. ನೀತಿ ಮಾರ್ಗದರ್ಶನದ ಮೂಲವಾಗಿ ಮನಃಸಾಕ್ಷಿಯಾಗಿ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳನ್ನು ಮೌಲ್ಯೀಕರಿಸಿರಿ. **12 1/2**

Evaluate laws, rules, regulations are conscience as source of ethical guidance.

14. ಮಾನವನ ಕಾರ್ಯಗಳಲ್ಲಿ ನೀತಿಗಳ ನಿರ್ಧಾರಕಗಳು ಮತ್ತು ಪರಿಣಾಮಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ. **12 1/2**

Explain the determinants and consequences of ethics in human action with suitable Examples.

15. ಸಾರ್ವಜನಿಕ ಆಡಳಿತದಲ್ಲಿ ಜವಾಬ್ದಾರಿ ಹೊರುವಿಕೆ ಮತ್ತು ನೀತಿಯುತ ಪ್ರಶಾಸನದ ಪ್ರಾಮುಖ್ಯತೆಯನ್ನು ವಿವರಿಸಿ. **12 1/2**

Explain the importance of accountability and ethical governance in public administration.

16. ಸರ್ಕಾರದಲ್ಲಿನ ಪ್ರಸಕ್ತ ಪರಿಸ್ಥಿತಿಯಲ್ಲಿ ಸೇವಾ ಪೂರೈಕೆಯ ಗುಣಮಟ್ಟ ಮತ್ತು ನಡತೆಯ ಸಂಹಿತೆಗಳು ಅತಿ ಮುಖ್ಯ ಎಂಬುದನ್ನು ವಿವರಿಸಿ. **12 1/2**

Describe codes of conduct and quality of service delivery are most important at present scenario in governance.

17. ನೀತಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಸುಧಾರಕರು ಮತ್ತು ಆಡಳಿತಗಾರರು ವ್ಯಕ್ತಿಗತ ಮಾದರಿಗಳಾಗಿರುವುದಕ್ಕೆ ಒಂದು ಟಿಪ್ಪಣಿಯನ್ನು ಬರೆಯಿರಿ. **12 1/2**

Write a note on reformers and administrators who are role models for inculcating values.

18. ಸಾರ್ವಜನಿಕ ಸೇವೆಗಾಗಿ ಮನೋಭಾವ ಮತ್ತು ಮೂಲಭೂತ ಮೌಲ್ಯಗಳು ಅತ್ಯವಶ್ಯಕವೆಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ. **12 1/2**

Aptitude and fundamental rules are most essential concepts of civil service Critically evaluate.

19. ಸಾರ್ವಜನಿಕ ಪ್ರಶಾಸನದಲ್ಲಿ ನಾಗರಿಕ ಸನ್ನದು ಮತ್ತು ಮಾಹಿತಿ ಪ್ರಸರಣದ ಅಗತ್ಯತೆಯನ್ನು ವಿವರಿಸಿ. **12 1/2**

Explain the essentials of information sharing and citizen charter in public service.

20. ಸಾರ್ವಜನಿಕ ಆಡಳಿತದಲ್ಲಿ ದುರ್ಬಲ ವರ್ಗಗಳ ಬಗೆಗೆ ಸಹಿಷ್ಣುತೆ ಮತ್ತು ಸಹಾನುಭೂತಿ ಇವುಗಳು ಉತ್ತಮ ಆಡಳಿತಕ್ಕಾಗಿ ನೆರವಾಗುತ್ತವೆ. ಸೂಕ್ತ ಉದಾಹರಣೆಗಳೊಡನೆ ಮೌಲ್ಯೀಕರಿಸಿರಿ. **12 1/2**

In Public administration tolerance and compassion towards the weaker section help for better governance. Evaluate with suitable example.

---